**ದಿಃ 05.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ವಾದಿ ಪರ ವಕೀಲರವರಿಂದ:**

ನಾನು ಈ ದಾವೆಯಲ್ಲಿ ವಾದಿಯಾಗಿರುತ್ತೇನೆ. ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನಿಜ ಇವೆ. ನಂತರ ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರು ಪಡಿಸಿ ನಿಶಾನೆಗೊಳಿಸಿಕೊಂಡಿರುತ್ತೇನೆ.

ನಿಪಿ-1- ಪಹಣಿ ಪತ್ರಿಕೆ

ನಿಪಿ-2- ಜ್ಞಾಪನಾ ಪತ್ರದ ಯತಾ ನಕಲು

ನಿಪಿ-3- ಘಟಪ್ರಬಾ ಪೋಲಿಸ ಠಾಣೆಯ ಅನುಮತಿ ಪತ್ರದ ಯತಾ ನಕಲು

ನಿಪಿ-4- ಪ್ರತಮ ವರ್ತಮಾನ ವರದಿಯ ಯತಾ ನಕಲು

ನಿಪಿ-5 - ದೂರಿನ ಯತಾ ನಕಲು

ನಿಪಿ-6- ದಿಃ06-02-2026ರ ದಿನಪತ್ರಿಕೆ

ನಿಪಿ-6ಎ-ದಿನಪತ್ರಿಕೆಯ ಸಂಬಂಧಿಪಟ್ಟ ಭಾಗ

**ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 2 ಪರ ಮಾನ್ಯ ಎಜಿಪಿ ರವರಿಂದಃ**

1) ನಾನು ದ್ವಿತಿಯ ಪಿಯುಸಿ ವರೆಗೆ ಓದಿರುತ್ತೆನೆ. ನನಗೆ ಕನ್ನಡ ಮಾತ್ರ ಓದಲು ಬರೆಯಲು ಬರೆಯುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರವಾಣ ಪತ್ರದಲ್ಲಿಯ ವಿಪಯಗಳು ಗೊತ್ತಿವೆ. ನಾವು ಪ್ರಸ್ತುತ ದಾವೆಯನ್ನು ಪಹಣಿಯಲ್ಲಪಿಯ ನನ್ನ ಮೃತ ಸಹೋದರನ ಹೆಸರನ್ನು ಕಡಿಮೆಗೊಳಿಸಿಕೊಳ್ಳಲು ಸಲ್ಲಿಸಿರುತ್ತೇವೆ. ನನ್ನ ತಂದೆ ಹೆಸರು ಭೀಮಪ್ಪಾ ತಾಯಿಯ ಹೆಸರು ರತ್ನವ್ವಾ. ನಾವು ಒಟ್ಟು ಐದು ಜನ ಮಕ್ಕಳು ಇರುತ್ತೇವೆ. ನನ್ನ ಸಹೋದರ ಸಂತೋಷ 2012

ರಿಂದ ಮನೆ ಬಿಟ್ಟು ಹೋಗಿದ್ದು ಇಲ್ಲಿಯವರೆಗೆ ಪತ್ತೆ ಆಗಿರುವುದಿಲ್ಲ. ಅವರನ್ನು ಹುಡುಕಾಡಲು ಪ್ರಯತ್ನಿಸಿದ್ದು , ದೂರನ್ನು ಸಹ ನೀಡಿದ್ದು, ಅವರು ಪತ್ತೆ ಆಗಿರುವುದಿಲ್ಲ. ನನ್ನ ಅಣ್ಣ ಕಾಣೆ ಆಗಿ ಒಂದು ವಾರದ ನಂತರ ದೂರು ನೀಡಿರುತ್ತೇವೆ. ನನ್ನ ಅಣ್ಣನ ಮರಣ ಪ್ರಮಾಣ ಪತ್ರವನ್ನು ಪಡೆಯಲು ನಾವು ಅರ್ಜಿಯನ್ನು ನೀಡಿರುವುದಿಲ್ಲ. ಸಾಕ್ಷಿ ಸ್ವತಹಃ ಮುಂದುವರವೆದು ಮರಣ ಪ್ರಮಾಣ ಪತ್ರವನ್ನು ಪಡೆಯಲು ಗ್ರಾಮ ಲೇಕ್ಕಾಧಿಕಾರಿಗೆ ಹೇಳಿದ್ದು, ಅವರು ಮೌಖಿಕವಾಗಿ ನ್ಯಾಯಾಲಯ ಆದೇಶವನ್ನು ಪಡೇಯುವಂತೆ ತಿಳಿಸಿರುತ್ತಾರೆ. ನನ್ನ ಅಣ್ಣ ದಿಃ 30-09-2012 ರಂದು ಮನೆ ಬಿಟ್ಟು ಹೋದ ಬಗ್ಗೆ ತೋರಿಸಲು ಪೋಲಿಸರಿಗೆ ನೀಡಿದ ದೂರು ಮಾತ್ರ ಇರುತ್ತದೆ. ನನ್ನ ಅಣ್ಣ ಕಾಣೆಯಾದ ನಂತರ ದಿನಪತ್ರಿಕೆಯಲ್ಲಿ ಸಾರ್ವಜನಿಕ ಜಾಹಿರಾತನ್ನು ನೀಡಿದ್ದು ಆದರೆ ಸದರಿ ದಿನಪತ್ರಿಕೆ ಪ್ರತಿ ಲಭ್ಯವಿರುವುದಿಲ್ಲ. ನಾವು ಯಾವುದೇ ಜಾಹಿರಾತನ್ನು ನೀಡಿರದಿದ್ದರೂ , ನೀಡಿರುತ್ತೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಸದರಿ ದಿನಾಂಕದಿಂದು ಮನೆ ಬಿಟ್ಟು ಹೊಗಿರುವುದಿಲ್ಲ, ನಾವು ಖೊಟ್ಟಿದೂರನ್ನು ನೀಡಿ, ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ವಿಷಯಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಹೆ.ದಿ.&ನ್ಯಾದಂ., ಗೋಕಾಕ.